## ಪ್ರಾರ್ಥನೆ

### ಕುಂತಿಯ ಪ್ರಾರ್ಥನೆ

(ಭಾಗವತದಿಂದ)

ಇಮೇ ಜನಪದಾಃ ಸ್ವೃದ್ಧಾಃ ಸುಪಕ್ವೌಷಧಿವೀರುಧಃ ।
ವನಾದ್ರಿನದ್ಯುದನ್ವಂತೋ ಹ್ಯೇಧಂತೇ ತವ ವೀಕ್ಷಿತೈಃ ॥

ನಿನ್ನ ಕಟಾಕ್ಷದ ಪ್ರಭಾವದಿಂದಲೇ ಈ ದೇಶವು ಪಕ್ವ ಮತ್ತು ಸಂಪದ್ಭರಿತವಾದ ಧಾನ್ಯ ಮತ್ತು ಫಲಪುಷ್ಪಭರಿತವಾದ ಗಿಡ–ಮರ–ಬಳ್ಳಿಗಳ ಸಂಪತ್ತುಗಳಿಂದ ಸಮೃದ್ಧವಾಗಿದೆ. ಅರಣ್ಯ–ಗಿರಿ–ನದಿ–ಸಮುದ್ರಗಳೂ ಕಣ್ಣುಗಳಿಗೆ ಹಬ್ಬವಾಗಿವೆ.

ಅಥ ವಿಶ್ವೇಶ ವಿಶ್ವಾತ್ಮನ್ ವಿಶ್ವಮೂರ್ತೇ ಸ್ವಕೇಷು ಮೇ ।
ಸ್ನೇಹಪಾಶಮಿಮಂ ಛಿಂಧಿ ದೃಢಂ ಪಾಂಡುಷು ವೃಷ್ಣಿಷು ॥

ವಿಶ್ವೇಶ್ವರನೂ ವಿಶ್ವಾತ್ಮನೂ ವಿಶ್ವಮೂರ್ತಿಯೂ ಆಗಿರುವ ಪ್ರಭುವೇ! ಸ್ವಜನರಾಗಿರುವ ಈ ಪಾಂಡವರಲ್ಲಿಯೂ ಮತ್ತು ಯಾದವರಲ್ಲಿಯೂ ನನಗೆ ದೃಢವಾದ ಮಮತೆ ಬೆಳೆದುಬಿಟ್ಟಿದೆ. ಈ ಪ್ರಾಕೃತವಾದ ಪ್ರೇಮದ ಪಾಶವನ್ನು ಕತ್ತರಿಸಿಹಾಕು.

ತ್ವಯಿ ಮೇಽನನ್ಯವಿಷಯಾ ಮತಿರ್ಮಧುಪತೇಽಸಕೃತ್ ।
ರತಿಮುದ್ವಹತಾಂ ತದ್ವದ್ ಗಂಗೇವೌಘಮುದನ್ವತಿ ॥

ನಿನ್ನಲ್ಲಿಯೇ ನಿರಂತರವಾದ ಪ್ರೇಮವು ಹರಿಯುತ್ತಿರುವಂತೆ ಮಾಡು. ಪರಮಾನಂದಸ್ವರೂಪನಾದ ಮಧುಪತಿಯೇ! ಗಂಗೆಯ ಅಖಂಡಪ್ರವಾಹವು ಸಮುದ್ರದಲ್ಲಿಯೇ ಸದಾ ಹೋಗಿ ಸೇರುತ್ತಿರುವಂತೆ, ನನ್ನ ಬುದ್ಧಿಯೂ ನಿನ್ನಲ್ಲಿಯೇ ಪ್ರೇಮರಸ ಪೂರ್ಣಪ್ರವಾಹವಾಗಿ ಸದಾ ಹರಿಯುತ್ತಿರಲಿ. ಅಲ್ಲಿಯೇ ವಿಶ್ರಾಂತಿ ಪಡೆಯಲಿ.

ಶ್ರೀಕೃಷ್ಣ ಕೃಷ್ಣಸಖ ವೃಷ್ಣ್ಯೃಷಭಾನಿಧ್ರು–
ಗ್ರಾಜನ್ಯವಂಶದಹನಾನಪವರ್ಗವೀರ್ಯ ।
ಗೋವಿಂದ ಗೋದ್ವಿಜಸುರಾರ್ತಿಹರಾವತಾರ
ಯೋಗೇಶ್ವರಾಖಿಲಗುರೋ ಭಗವನ್ನಮಸ್ತೇ ॥

ಶ್ರೀಕೃಷ್ಣನೇ! ಕೃಷ್ಣನ (ಅರ್ಜುನನ) ಪ್ರಿಯಮಿತ್ರನೇ! ಯದು ವಂಶಶಿರೋಮಣಿಯೇ! ಭೂಮಿಗೆ ಭಾರವಾಗಿರುವ ರಾಜವೇಷ ಧಾರಿಗಳಾದ ದೈತ್ಯರ ವಂಶಕ್ಕೆ ಬೆಂಕಿಯಾದವನೇ! ಅನಂತ ವೀರ್ಯನೇ! ಗೋವಿಂದ! ಗೋವುಗಳ, ದ್ವಿಜರ ಮತ್ತು ದೇವತೆಗಳ ಸಕಲದುಃಖಗಳನ್ನೂ ಧ್ವಂಸಮಾಡುವುದಕ್ಕಾಗಿ ಅವತರಿಸಿರುವ ಸ್ವಾಮಿಯೇ! ಯೋಗೇಶ್ವರನೇ! ಚರಾಚರ ಗುರುವೇ! ಭಗವಂತ! ನಿನಗೆ ನಮೋ ನಮಃ.

## ಸೂಕ್ತಿಪ್ರಭ

### ಕೆಡುಕು

**ಒ**ಬ್ಬ ಮನುಷ್ಯನಲ್ಲಿ ಒಳ್ಳೆಯದು, ಕೆಟ್ಟದ್ದು ಎರಡೂ ಇರುತ್ತದೆ. ಬೇರೆಯವರಲ್ಲಿ ಕೆಡುಕನ್ನು ಕಾಣುವುದು ಸುಲಭ. ಆದರೆ ಮಹಾತ್ಮರು ಅಂತಹವರ ಕೆಟ್ಟ ಗುಣಗಳನ್ನು ಪರಿಗಣಿಸದೆ, ಅವರು ಪರಿಶುದ್ಧರೂ ಪವಿತ್ರಾತ್ಮರೂ ಆಗುವುದಕ್ಕೆ ನೆರವಾಗುತ್ತಾರೆ.

– ಸ್ವಾಮಿ ಬ್ರಹ್ಮಾನಂದ

**ನಿ**ನ್ನ ಮನಸ್ಸಿನಲ್ಲಿ ಕೆಡುಕಿನ ಯೋಚನೆಗಳು ಬಂದರೆ ಅದಕ್ಕೆ ಗಮನ ಕೊಡಬೇಡ. ಹಿಂದಿನ ಜನ್ಮಗಳ ವಾಸನೆಗಳು ನಿನ್ನ ಮನಸ್ಸಿನಲ್ಲಿ ಮನೆಮಾಡಿರುತ್ತವೆ. ಅವು ಒಮ್ಮೊಮ್ಮೆ ನಿನ್ನ ಅರಿವಿಗೆ ಬರುತ್ತವೆ, ಅಷ್ಟೆ. – ಸ್ವಾಮಿ ಶಿವಾನಂದ

**ರಾ**ಗ ಮತ್ತು ದ್ವೇಷಗಳೇ ಎಲ್ಲ ಕೆಡುಕಿನ ಮೂಲ. ಆದ್ದರಿಂದಲೇ ಅವುಗಳನ್ನು ತ್ಯಜಿಸಬೇಕೆಂದು ವಿಧಿಸಲಾಗಿದೆ. ಇದರಿಂದ ವಿಮುಕ್ತನಾದವನು, ನಿರಾಸಕ್ತನಾಗಿ ಯಾವ ಕೆಲಸವನ್ನು ಬೇಕಾದರೂ ಮಾಡಬಲ್ಲ. –ಸ್ವಾಮಿ ತುರೀಯಾನಂದ

**ಅ**ಭ್ಯಾಸಬಲದಿಂದ ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳು ಏಳುತ್ತವೆ. ಸತತ ಪ್ರಯತ್ನದಿಂದ ಅದಕ್ಕೆ ವಿರುದ್ಧವಾದ ಅಭ್ಯಾಸವನ್ನು ಮಾಡಿಕೊಂಡರೆ, ಕೆಟ್ಟ ಆಲೋಚನೆಗಳು ಮನಸ್ಸಿನಲ್ಲಿ ಏಳುವುದಿಲ್ಲ.

–ಸ್ವಾಮಿ ಅಭೇದಾನಂದ

**ಎ**ಲ್ಲ ಕೆಡುಕುಗಳಿಗಿಂತಲೂ ಭಯಂಕರವಾದ ಮೃತ್ಯುವು ಏನೂ ಅಲ್ಲ. ಏಕೆಂದರೆ, ನಾವು ಬದುಕಿರುವಾಗ, ಅಲ್ಲಿ ಸಾವು ಇರುವುದಿಲ್ಲ. ಹಾಗೆಯೇ ಸಾವು ಇರುವಾಗ, ನಾವು ಆಗ ಬದುಕಿರುವುದೇ ಇಲ್ಲ. – ಎಪಿಕ್ಯೂರಸ್

**ಮ**ರಣ? ಮರಣದ ಬಗ್ಗೆ ಯಾಕಿಷ್ಟು ಗೊಂದಲ? ನಿಮ್ಮ ಕಲ್ಪನಾಶಕ್ತಿಯನ್ನು ಉಪಯೋಗಿಸಿ, ಸಾವಿಲ್ಲದ ಜಗತ್ತನ್ನು ಕಲ್ಪಿಸಿಕೊಳ್ಳಿ, ಅದು ಸಾಧ್ಯವೇ ಇಲ್ಲ. ಮರಣ ಬದುಕಿನ ಅನಿವಾರ್ಯ ಸಂದರ್ಭ. ಆದರೆ ಕೆಡುಕು ಅಂತಹ ಅನಿವಾರ್ಯ ಸಂಗತಿಯಲ್ಲ. – ಗಿಲ್ ಮ್ಯಾನ್

**ಮಾ**ನವರು ಎಸಗುವ ಎಲ್ಲ ಕೆಡುಕಿನ ಮೂಲವನ್ನು ನಾನು ಕಂಡುಹಿಡಿದಿದ್ದೇನೆ. ಅದೇನೆಂದರೆ ಮಾನವನಿಗೆ ಒಂದು ಕೊಠಡಿಯಲ್ಲಿ ಏನೂ ಮಾಡದೆ ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ. – ಪ್ಯಾಸ್ಕಲ್

**ಈ** ಪ್ರಪಂಚವು ಬದುಕುವುದಕ್ಕೆ ಅಪಾಯಕಾರಿಯಾದ ಸ್ಥಳವಾಗಿದೆ. ಇದಕ್ಕೆ ಕಾರಣ, ಇಲ್ಲಿ ವಾಸಿಸುವ ಜನರು ಕೆಟ್ಟವರೆಂದೇನಲ್ಲ, ಬದಲಾಗಿ ಆ ಕೆಡುಕಿನ ಬಗ್ಗೆ ಅವರು ಏನೂ ಮಾಡುತ್ತಿಲ್ಲ, ಅದಕ್ಕೆ. – ಐನ್‌ಸ್ಟೈನ್